ದಿನಾಂಕ **14-07-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಯು.ಕೆ.ವೈ. ವಕೀಲರಿಂದ

ಪ್ರತಿವಾದಿಗೆ ನನ್ನ ಹೆಂಡತಿ ತಾನು ಕೂಡಿಟ್ಟ ಹಣವನ್ನು ನೀಡಿದ ವಿಚಾರ ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ. ಪ್ರತಿವಾದಿಯಿಂದ ನಾನು ನೀಡಿದ ಹಣಕ್ಕೆ ಪ್ರತಿವಾದಿ ಯಾವುದೇ ಬಡ್ಡಿ ನೀಡಿಲ್ಲ. ಪ್ರತಿವಾದಿಯಿಂದ ಬಡ್ಡಿ ಹಣ ಪಡೆದುಕೊಂಡ ಬಗ್ಗೆ ನನ್ನ ಹೆಂಡತಿ ನನಗೆ ಏನೂ ಹೇಳಿಲ್ಲ ಮತ್ತು ಬಡ್ಡಿ ಪಡೆದುಕೊಂಡಿಲ್ಲ. ರೂ. 1,20,000/- ಗಳಿಗೆ ಪ್ರತಿವಾದಿ ದಿ: 15-07-2017 ರಿಂದ 30-11-2018 ರವರೆಗೆ ಒಟ್ಟು ಬಡ್ಡಿ ಸೇರಿಸಿ ರೂ. 1,32,000/- ಹಣವನ್ನು ನಮಗೆ ನೀಡಿದ್ದಾನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಕೂಡ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಎಲ್ಲಾ ಹಣ ಮರುಪಾವತಿ ಮಾಡಿದ್ದರೂ ಸಹ ಆತನಿಗೆ ತೊಂದರೆ ಕೊಡಲು ಮತ್ತು ಆತನಿಂದ ಹೆಚ್ಚಿನ ಹಣ ವಸೂಲಿ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಎಲ್ಲಾ ಹಣವನ್ನು ಮರಳಿ ಪಡೆದುಕೊಂಡ ನಂತರವೂ ಸಹ ಆತ ನಮ್ಮ ಪರವಾಗಿ ಬರೆದುಕೊಟ್ಟ ಖರೀದಿ ಕರಾರು ಪತ್ರವನ್ನು ರದ್ದುಗೊಳಿಸದೇ ಆತನಿಗೆ ತೊಂದರೆ ಕೊಡಲು ಈ ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಕಾಲಪರಿಮಿತಿ ಅಧಿನಿಯಮದಡಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಸಿಂಧನೂರು.